# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 45 (80) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 04.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಬೈಕಂಪಾಡಿ ಕೈಗಾರಿಕಾ ಪ್ರದೇಶದ ODC Road ರಸ್ತೆ ತೀರ ಹದಗೆಟ್ಟಿದ್ದು ವಾಹನ ಸುಗಮ ಸಂಚಾರಕ್ಕೆ ಸಾರ್ವಜನಿಕ ಸುರಕ್ಷತೆಗೆ ಅಪಾಯಕಾರಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇನ್ನು ಇದೇ ಸ್ಥಿತಿಯಲ್ಲಿರುವ ರಸ್ತೆ ಅಭಿವೃದ್ಧಿಪಡಿಸಲು ಇರುವ ತೊಡಕುಗಳೇನು (ವಿವರ ನೀಡುವುದು) | ಮಂಗಳೂರಿನಲ್ಲಿ ಬೈಕಂಪಾಡಿ ಕೈಗಾರಿಕಾ ಪ್ರದೇಶಕ್ಕೆ ಹಾಗೂ ಜೆಸ್ಕೋಲ್ಯಾಂಡ್ ಗೆ ಹೊಂದಿಕೊಂಡಿರುವಂತೆ ಇರುವ 1.8 ಕಿ.ಮೀ ಉದ್ದದ Over Dimensional consignment (ODC) ರಸ್ತೆಯನ್ನು Mangaluru Special Economic Zone (MSEZ) ರವರು ತಮಗೆ ಹಂಚಿಕೆಯಾಗಿರುವ ಜಮೀನಿನಲ್ಲಿ ನಿರ್ಮಿಸಿಕೊಂಡಿರುತ್ತಾರೆ.<br><br>ಸದರಿ 1.8 ಕಿ.ಮೀ ಉದ್ದದ Over Dimensional Consignment (ODC) ರಸ್ತೆಯನ್ನು Mangaluru Special Economic Zone (MSEZ) ರವರೇ ನಿರ್ಮಿಸಿರುವುದರಿಂದ, ರಸ್ತೆಯ ದುರಸ್ಥಿ ಮತ್ತು ಅಭಿವೃದ್ಧಿಯನ್ನು Mangaluru Special Economic Zone (MSEZ) ರವರಿಂದ ಕೈಗೊಳ್ಳಬೇಕಾಗಿರುತ್ತದೆ. |
| ಆ) | 2.1 ಕಿಮೀ ಉದ್ದದ MRPL ನವರು ಅಭಿವೃದ್ಧಿಗೊಳಿಸಿದ ಈ ರಸ್ತೆ ಕೆಲವು ಕಡೆಗಳಲ್ಲಿ ರಸ್ತೆಯೇ ಇಲ್ಲವಾಗಿದ್ದು ರಸ್ತೆ ಅಗಲೀಕರಣ ನಿರ್ವಹಣೆ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ಯಾವಾಗ ಕ್ರಮ ಕೈಗೊಳ್ಳಲಾಗುವುದು; (ವಿವರ ನೀಡುವುದು) | ಮಂಗಳೂರು ಬೈಕಂಪಾಡಿ ಕೈಗಾರಿಕಾ ಪ್ರದೇಶದ ಜೆಸ್ಕೋಲ್ಯಾಂಡಿನಲ್ಲಿ 9.17 ಎಕರೆ ಜಮೀನನ್ನು Mangalore Refinery and Petrochemicals Limited (MRPL) ರವರಿಗೆ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಜಮೀನಿನಲ್ಲಿ MRPL ರವರು 2.1 ಕಿ.ಮೀ ಉದ್ದದ ರಸ್ತೆಯನ್ನು ನಿರ್ಮಿಸಿರುತ್ತಾರೆ.<br><br>ಸದರಿ 2.1 ಕಿ.ಮೀ ಉದ್ದದ ರಸ್ತೆಯನ್ನು MRPL ರವರೇ ನಿರ್ಮಿಸಿರುವುದರಿಂದ, ದುರಸ್ಥಿ ಹಾಗೂ ನಿರ್ವಹಣೆ ಕಾಮಗಾರಿಯನ್ನು ಅವರೇ ಕೈಗೊಳ್ಳಬೇಕಾಗಿರುತ್ತದೆ. |
| ಇ) | ಈ ರಸ್ತೆಯನ್ನು KIADB ಮುಖಾಂತರ ಅಭಿವೃದ್ಧಿ ಪಡಿಸಲು ಸರ್ಕಾರದ ನಿಲುವುಗಳೇನು; | 'Y' ಜಂಕ್ಷನ್ ನಿಂದ ಜೋಕಟ್ಟೆ ವರೆಗಿನ 2.1 ಕಿ.ಮೀ. ಉದ್ದದ ರಸ್ತೆಯನ್ನು MRPL ಸಂಸ್ಥೆಯು ಮಂಡಳಿಯಿಂದ ಹಂಚಿಕೆಯಾದ ತಮ್ಮ ಜಮೀನಿನಲ್ಲಿ ನಿರ್ಮಿಸಿರುತ್ತದೆ. ಆದುದರಿಂದ ಸದರಿ ರಸ್ತೆಯ ನಿರ್ವಹಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳು MRPL ಸಂಸ್ಥೆಗೆ ಸೇರಿರುತ್ತದೆ. |

| | | |
|---|---|---|
| ಈ) | MRPL ನೊಂದಿಗೆ ಪಬ್ಲಿಕ್ ಪ್ರೈವೇಟ್ ಸಹಭಾಗಿತ್ವದಲ್ಲಿ ODC ರಸ್ತೆಯನ್ನು ಅಗಲೀಕರಣಗೊಳಿಸಿ ಘನ ಸರಕು ಸಾಗಣಿ ವಾಹನಗಳ ಸುರಕ್ಷತೆಗೆ ಆದ್ಯತೆ ಮೇರೆಗೆ ಸುಸಜ್ಜಿತಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು; | Over Dimensional Consignment (ODC) ರಸ್ತೆಯು ಸೇರಿ ಪೂರಕ ರಸ್ತೆಗಳ ಅಭಿವೃದ್ಧಿಯನ್ನು MSEZ/MRPL ಸಂಸ್ಥೆಯವರೇ ಕೈಗೊಳ್ಳಬೇಕಾಗಿರುತ್ತದೆ. |
| ಉ) | ODC ರಸ್ತೆಯು ಸೇರಿ ಪೂರಕ ರಸ್ತೆಗಳಾದಿಯಾಗಿ ಪ್ರದೇಶಾಭಿವೃದ್ಧಿಗೆ KIADB ವತಿಯಿಂದ ಯಾವ ಯೋಜನೆ ಅನುದಾನದ ಅವಕಾಶಗಳಿವೆ? (ವಿಸ್ತೃತ ವರದಿ ನೀಡುವುದು) | |

**ಸಂಖ್ಯೆ: ಸಿಐ 120 ಐಎಪಿ 2023**

(ಎಂ.ಬಿ.ಪಾಟೀಲ)

**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**